ಕರ್ನಾಟಕ ಸರ್ಕಾರ
(ಕಂದಾಯ ಇಲಾಖೆ)
ತಹಶೀಲ್ದಾರ್‌ರವರ ನ್ಯಾಯಾಲಯ ಕೂಡ್ಲಿಗಿ

ಸಂ/ಕಂ/ಪಹಣಿ:ವಿವಾದ/07/2016-17. ದಿನಾಂಕ: 28-06-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಕೊತ್ಲಮ್ಮ ಗಂಡ ರಾಮಯ್ಯ<br>2)ಟಿ.ಮರುಳಸಿದ್ದನಗೌಡ ತಂದೆ ಸಿದ್ದನಗೌಡ<br>3)ವಿಜಯಕುಮಾರ<br>4)ನಾಗರಾಜಶೆಟ್ಟಿ ತಂದೆ ಬಿ.ಲಕ್ಷ್ಮೀನಾರಾಯಣ ಶೆಟ್ಟಿ<br>5)ಬಾಣದ ಹನುಮಪ್ಪ ತಾಯಿ ಚೌಡಮ್ಮ<br>6)ಗುನ್ನಳ್ಳಿ ಮಾರಮ್ಮ ಗಂಡ ಲೇಟ್ ಗುನ್ನಳ್ಳಿ ಹನುಮಂತಪ್ಪ<br>7)ನಾಗಮ್ಮ ಗಂಡ ಲೇಟ್ ಗುನ್ನಳ್ಳಿ ದುರುಗಪ್ಪ<br>8)ಗುನ್ನಳ್ಳಿ ಹನುಮಕ್ಕ ಗಂಡ ಲೇಟ್ ಗುನ್ನಳ್ಳಿ ಬುಳ್ಳಪ್ಪ<br>9)ಗುನ್ನಳ್ಳಿ ಮಾರೇಶ ತಂದೆ ಲೇಟ್ ಗುನ್ನಳ್ಳಿ ಲಕ್ಷ್ಮಪ್ಪ<br>ಕೂಡ್ಲಿಗಿ ಪಟ್ಟಣ<br>ಕೂಡ್ಲಿಗಿ ತಾಲೂಕು | 1)ಮರಿಯಪ್ಪ ತಾಯಿ ನಿಂಗಮ್ಮ<br>2)ಚಂದ್ರಪ್ಪ ತಂದೆ ಕೊತ್ಲಪ್ಪ<br>3)ಚೌಡಮ್ಮ ತಾಯಿ ಮುದ್ದಮ್ಮ<br>14 ನೇ ವಾರ್ಡ ಕೂಡ್ಲಿಗಿ ಪಟ್ಟಣ<br>ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ಕೂಡ್ಲಿಗಿ ಪಟ್ಟಣದ ಸನಂ 539ಬಿ/2ಬಿ/1. ವಿಸ್ತೀರ್ಣ 1-62 ಎಕ್ರೆ ಜಮೀನನ್ನು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಕೂಡ್ಲಿಗಿ ಪಟ್ಟಣದ ಸನಂ 539ಬಿ/2ಬಿ/1. ವಿಸ್ತೀರ್ಣ 1-62 ಎಕ್ರೆ ಜಮೀನನ್ನು ಸದರಿ ಪಟ್ಟಣದ ಗುನ್ನಳ್ಳಿ ಮಾರೇಶ ತಂದೆ ಲೇಟ್ ಗುನ್ನಳ್ಳಿ ಲಕ್ಷ್ಮಪ್ಪ ಇವರು ಪೋತಿವಾರಸು ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಕೂಡ್ಲಿಗಿ ಇವರು ನಮೂನೆ-21 ರ ನೋಟಿಸನ್ನು ದಿನಾಂಕ 29-04-2016 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ಪಟ್ಟಣದ ಮರಿಯಪ್ಪ ತಾಯಿ ನಿಂಗಮ್ಮ, ಚಂದ್ರಪ್ಪ ತಂದೆ ಕೊತ್ಲಪ್ಪ, ಚೌಡಮ್ಮ ತಾಯಿ ಮುದ್ದಮ್ಮ ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣವನ್ನು ಎಂ.ಆರ್.ನಂಬರ್: 84/2015-16. ದಿನಾಂಕ 30-05-2016 ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 08-06-2016 ರಿಂದ 28-06-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ಕೂಡ್ಲಿಗಿ ಪಟ್ಟಣದ ಸನಂ 539ಬಿ/2ಬಿ/1. ವಿಸ್ತೀರ್ಣ 1-62. ಎಕ್ರೆ ಜಮೀನು ನಮ್ಮ ದೊಡ್ಡಮ್ಮಳಾದ ಗುನ್ನಳ್ಳಿ

ಭೀಮವ್ವ ತಂದೆ ಭೀಮಯ್ಯ ಇವರ ಹೆಸರಲ್ಲಿ ಜಂಟಿ ಪಟ್ಟಾ ಲೆಕ್ಕ ದಾಖಲೆ ಇರುತ್ತದೆ. ಇವರು ದಿನಾಂಕ 25-01-2016 ರಂದು ನಿಧನ ಹೊಂದಿರುತ್ತಾರೆ. ಇವರಿಗೆ ಸಂತಾನ ಇರುವುದಿಲ್ಲ ಕಾರಣ ಗುನ್ನಳ್ಳಿ ಭೀಮವ್ವ ತಂದೆ ಭೀಮಯ್ಯ ಇವರ ಹೆಸರನ್ನು ಕಡಿಮೆ ಮಾಡಿ ಪೋತಿವಾರಸು ಹಕ್ಕಿನ ಪ್ರಕಾರ ನಮ್ಮಗಳ ಹೆಸರಲ್ಲಿ ಪೂರ್ವ ಪಟ್ಟದಾರರ ಜೊತೆ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರು ಹಾಜರಾಗಿದ್ದು ಸದರಿ ವಿವಾದಿತ ಜಮೀನಿನಲ್ಲಿ ನಾವುಗಳು ವಾರಸುದಾರರಾಗಿದ್ದು ಮತ್ತು ಹಕ್ಕು ಬಾದ್ಯಸ್ಥರಾಗಿರುವುದರಿಂದ ಪೋತಿವಾರಸು ಹಕ್ಕಿನ ಪ್ರಕಾರ ಅರ್ಜಿದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ನಮ್ಮ ತಕರಾರು ಇರುವುದಾಗಿ ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರು ಮತ್ತು ತಕರಾರುದಾರರ ಹೇಳಿಕೆಗಳನ್ನು ಕೇಳಿ ತಕರಾರದಾರರು ತಮ್ಮ ತಕರಾರು ಬಗ್ಗೆ ತಮ್ಮ ಹಕ್ಕನ್ನು ಸಾಬೀತು ಪಡಿಸಲು ಯಾವುದೇ ದಾಖಲೆಗಳನ್ನು ಸಲ್ಲಿಸಲು ವಿಫಲರಾದ ಕಾರಣ ಅವರ ತಕರಾರು ಅರ್ಜಿಯನ್ನು ತಳ್ಳಿಹಾಕಿ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಕೂಡ್ಲಿಗಿ ಪಟ್ಟಣದ ಸನಂ 539ಬಿ/2ಬಿ/1. ವಿಸ್ತೀರ್ಣ 1-62. ಎಕ್ರೆ ಜಮೀನಿನಲ್ಲಿ ಗುನ್ನಳ್ಳಿ ಭೀಮವ್ವ ತಂದೆ ಭೀಮಯ್ಯ ಇವರ ಹೆಸರನ್ನು ಕಡಿಮೆ ಮಾಡಿ ಪೋತಿವಾರಸು ಹಕ್ಕಿನ ಪ್ರಕಾರ ಅರ್ಜಿದಾರರಾದ ಗುನ್ನಳ್ಳಿ ಮಾರಮ್ಮ ಗಂಡ ಲೇಟ್ ಗುನ್ನಳ್ಳಿ ಹನುಮಂತಪ್ಪ. ಗುನ್ನಳ್ಳಿ ಮಾರೇಶ ತಂದೆ ಲೇಟ್ ಗುನ್ನಳ್ಳಿ ಲಕ್ಷ್ಮಪ್ಪ. ನಾಗಮ್ಮ ಗಂಡ ಲೇಟ್ ಗುನ್ನಳ್ಳಿ ದುರುಗಪ್ಪ. ಗುನ್ನಳ್ಳಿ ಹನುಮಕ್ಕ ಗಂಡ ಲೇಟ್ ಗುನ್ನಳ್ಳಿ ಬುಳ್ಳಪ್ಪ ಇವರುಗಳ ಹೆಸರುಗಳನ್ನು ಪೂರ್ವ ಪಟ್ಟದಾರರ ಜೊತೆ ಜಂಟಿಯಾಗಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 28-06-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ತಹಶೀಲ್ದಾರರು. ಕೂಡ್ಲಿಗಿ.

ಇದರ ಪ್ರತಿಯನ್ನು:

1) ಅರ್ಜಿದಾರರಾದ ಗುನ್ನಳ್ಳಿ ಮಾರೇಶ ತಂದೆ ಲೇಟ್ ಗುನ್ನಳ್ಳಿ ಲಕ್ಷ್ಮಪ್ಪ. ಗುನ್ನಳ್ಳಿ ಮಾರಮ್ಮ ಗಂಡ ಲೇಟ್ ಗುನ್ನಳ್ಳಿ ಹನುಮಂತಪ್ಪ ಹಾಗೂ ಇತರರು ಕೂಡ್ಲಿಗಿ ಪಟ್ಟಣ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಮರಿಯಪ್ಪ ತಾಯಿ ನಿಂಗಮ್ಮ. ಚಂದ್ರಪ್ಪ ತಂದೆ ಕೊತ್ಲಪ್ಪ. ಚೌಡಮ್ಮ ತಾಯಿ ಮುದ್ದಮ್ಮ 14 ನೇ ವಾರ್ಡ ಕೂಡ್ಲಿಗಿ ಪಟ್ಟಣ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಚೇರಿ ಕೂಡ್ಲಿಗಿ ಇವರ ಮುಂದಿನ [illegible]
4) ಅಪೀಲು ಅವಧಿ 60 ದಿವಸ ಇರುತ್ತದೆ.

ದೃಢೀಕೃತ ನಕಲು

ಶಿರಸ್ತೇದಾರರು
ತಾಲೂಕು ಕಛೇರಿ
ಕೂಡ್ಲಿಗಿ.

ಕೂಡ್ಲಿಗಿ. ಬಳ್ಳಾರಿ